ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ ಸಿ 37-2019

ಸಿ.ಡಬ್ಲ್ಯೂ-01
ಪಿ.ಡಬ್ಲ್ಯೂ-01

<u>ಸಾಕ್ಷಿಗೆ ದಿಃ **19.11.2024** ರಂದು ಪ್ರಮಾಣ ವಚನ ಬೋದಿಸಲಾಯಿತು.</u>

<u>**ಪಾಟೀ ಸವಾಲುಃ ಆರೋಪಿಪರಃ ಶ್ರೀ.T.G.T ವಕೀಲರಿಂದಃ**</u>

ನನ್ನ ಚಿಕ್ಕಪ್ಪ ಅವರು  ಈಗ್ಗೆ 3 ವರ್ಷದ ಹಿಂದೆ ನಿವೃತ್ತಿ ಹೊಂದಿರುತ್ತಾರೆ. ಒಟ್ಟು ನಮ್ಮ ಕುಟುಂಬಕ್ಕೆ 64/4 ರಲ್ಲಿ 15 ಗುಂಟೆ, 50/7 ಮತ್ತು 50/8 ರಲ್ಲಿ 15 ಗುಂಟೆ. ನಮ್ಮ ಚಿಕ್ಕಪ್ಪನ ವಾಸ 3 ವರ್ಷಗಳಿಂದ ಅರಳಿಮರದದೊಡ್ಡಿಯಲ್ಲಿ ವಾಸ ಇದ್ದಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ಆರೋಪಿ 1 ಈಗ ಯಾವ ಜಮೀನಿನಲ್ಲಿ ಸ್ವಾಧೀನದಲ್ಲಿಲ್ಲ.  ನನಗೆ 6 ಜನ ಅಕ್ಕ ತಂಗಿಯರು ಇರುತ್ತಾರೆ. ಸುಜಾತಾ ಅವರನ್ನು ಮಾದಪ್ಪನಹಳ್ಳಿಗೆ ಕೊಟ್ಟು ಮದುವೆ ಮಾಡಿರುತ್ತೇವೆ. ಅವರು ಮೊದಲೇ ನಮ್ಮ ತಾಯಿಗೆ ಹುಷಾರ ಇಲ್ಲದ ಕಾರಣ ಊರಿಗೆ ಬಂದಿದ್ದರು. ನಮ್ಮ ಮನೆಗೆ ನಮ್ಮ ಚಿಕ್ಕಪ್ಪನ ಮನಗೆ ಎಷ್ಟು ದೂರ ಇದೆ ಎಂದರೆ ಸಾಕ್ಷಿ ಒಂದೇ ಮನೆಯಿದ್ದು ಮದ್ಯದಲ್ಲಿ ಗೋಡೆ ಇರುತ್ತದೆ ಎಂದು ಹೇಳುತ್ತಾರೆ.

ಹಲವು ಬಾರಿ ಗಲಾಟೆ ಮಾಡಿದ ಬಗ್ಗೆ ದೂರಿನಲ್ಲಿ ಹೇಳಿದ್ದು ನೀವು ದೂರನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಅವರು ದೂರನ್ನು ನೀಡಿದ್ದರು ಎಂದು ಹೇಳುತ್ತಾರೆ. ಈ ಗಲಾಟೆಗೂ ಮೊದಲು ದೂರನ್ನು ನೀಡಿರುತ್ತಾರೆ. ನಾನು ಬೆಂಗಳೂರಿನಲ್ಲಿ ಹೆಲ್ಪರ್ ಕೆಲಸ ಮಾಡುತ್ತೇನೆ. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ. ಗಲಾಟೆ ಆಗಿದೆ ಎನ್ನುವ ದಿನ ನಾನು ಬೆಂಗಳೂರಿನಲ್ಲಿ ಇಲ್ಲಿಗೆ ಬಂದಿದ್ದೆ. 01.12.2019 ರಂದು ನಾನು ಊರಿಗೆ ಬಂದಿರುತ್ತೇನೆ. ನಾನು ಆ ದಿನ ಬೆಂಗಳೂರನ್ನು ಬೆಳಿಗ್ಗೆ 7.30 ಗಂಟೆಗೆ ಬಿಟ್ಟಿರುತ್ತೇನೆ. ನನ್ನ ತಾಯಿಗೆ ಹುಷಾರ ಇಲ್ಲದ ಕಾರಣ ನಾನು ಊರಿಗೆ ಬಂದಿರುತ್ತೇನೆ. ದೂರಿನಲ್ಲಿ ಎಲ್ಲಿಯೂ ಸಹ ನನ್ನ ತಾಯಿಗೆ ಹುಷಾರಿಲ್ಲವೆಂದು ಬರೆದಿಲ್ಲವೆಂದರೆ ಸಾಕ್ಷಿ ನಾನು ಬಂದ ಹತ್ತು ದಿನಗಳ

ಬಳಿಕ ಗಲಾಟೆ ಆಗಿರುತ್ತದೆ ಎಂದು ಹೇಳುತ್ತಾರೆ. ಹತ್ತು ದಿವಸಗಳ ಕಾಲ ನಾನು ಬೆಂಗಳೂರಿಗೆ ಹೋಗಿ ಬಂದು ಮಾಡುತ್ತಿದ್ದೆ. ನಾನು ಪ್ರತಿದಿನವೂ ಬೆಂಗಳೂರಿಗೆ ಹೋಗಿ ಬಂದು ಮಾಡುತ್ತಿದ್ದೆ. 12.01.2019 ರಂದು ನಾನು ಕೆಲಸಕ್ಕೆ ಹೋಗಿರಲಿಲ್ಲ. ಆ ದಿನ ನಾನು ಜಮೀನು ಉಳುಮೆ ಮಾಡಲು ಊರಿನಲ್ಲಿದ್ದೆ.

12 ಗಂಟೆಯ ಸಮಯದಲ್ಲಿ ಜಮೀನಿನ ಹತ್ತಿರ ನಾನು ಬೇಲಿ ಕತ್ತರಿಸುತ್ತಿದ್ದೆ. ಸದರಿ ಜಮೀನು ನಮ್ಮ ಮನೆಯಿಂದ 5 ರಿಂದ 6 ಮೀಟರ ದೂರಿದಲ್ಲಿದೆ. ಯಾವ ವಿಚಾರಕ್ಕೆ ಗಲಾಟೆ ಆಯಿತೆಂದು ದೂರಿನಲ್ಲಿ ಬರೆದಿರುವುದಿಲ್ಲವೆಂದರೆ ಸರಿ. ನ್ಯಾಯ ಪಂಚಾಯಿತಿ ಮಾಡಿರುವವರು ಯಾರು ಯಾರು ಎಂದು ದೂರಿನಲ್ಲಿ ಹೇಳಿರುವುದಿಲ್ಲ. ಬೆಳಿಗ್ಗೆ 11 ರಿಂದ 12 ಗಂಟೆಯ ಸಮಯದಲ್ಲಿ ಜಮೀನಿನಲ್ಲಿ ಉಳುಮೆ ಮಾಡುವ ಕುರಿತು ಕೆಲಸ ಮಾಡುತ್ತಿದ್ದೇ. ನಮ್ಮ ಮನೆಯ ಮುಂಬಾಗದಲ್ಲಿ ಜಮೀನು ಇರುವ ಕಾರಣ ನಾನು ಕೆಲಸ ಮಾಡುತ್ತಿದ್ದರೆ ಅವರಿಗೆ ಕಾಣುತ್ತದೆ ಎಂದರೆ ಸರಿ. ಸದರಿ ಅವದಿಯಲ್ಲಿ ನಾನು ಕೆಲಸ ಮಾಡುವ ಸಮಯದಲ್ಲಿ ನನ್ನ ಬಳಿ ಆರೋಪಿತರೆಲ್ಲರೂ ಬಂದಿದ್ದರು.

ಮೊದಲು ಬಂದು ಕೇಳಿದ ವಿಚಾರವನ್ನು ದೂರಿನಲ್ಲಿ ಬರೆದಿರುವುದಿಲ್ಲ. ಗಲಾಟೆ ಆಗಿದೆ ಎನ್ನುವ ಸಮಯದಲ್ಲಿ ಆರೋಪಿ 1 ನನ್ನ ಕೊರಳ ಪಟ್ಟಿ ಹಿಡಿದಾಗ ನನ್ನ ಶರ್ಟ ನ ಗುಂಡಿ ಕಿತ್ತಿರುವುದಿಲ್ಲ ಮತ್ತು ಶರ್ಟ ಹರಿದಿರುವುದಿಲ್ಲ. ನಾನು ಚಾಸಾ 2 ಮತುತ 3 ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ. ದೂರಿನಲ್ಲಿ ಕಳ್ಳಿ ಕಡಿಯುದ್ದ ವಿಚಾರಕ್ಕೆ ಗಲಾಟೆ ಆಗಿರುತ್ತದೆಂದು ಬರೆದಿರುವುದಿಲ್ಲ. ನನ್ನ ತಾಯಿ ಧರಿಸಿದ್ದ ಸೀರೆಯನ್ನು ಎಳೆದಾಡಿದ್ದು ಅದನು ನೀಲಿ ಬಣದಾಗಿದ್ದು ಕಿತ್ತು ಹೋಗಿರುವ ಬಗ್ಗೆ ನಾನು ನೋಡಿರುವುದಿಲ್ಲ. ಸೀರೆಯನ್ನು ಪೊ. ಠಾಣೆಗೆ ತೆಗದುಕೊಂಡು ಹೋಗಿರಲಿಲ್ಲ.

ಚಪ್ಪಲಿ ತಗೆದುಕೊಂಡು ಹೊಡೆದಿರುವುದಾಗಿ ಹೇಳಿದ್ದು ಅದರ ಬಣ್ಣ ಮತ್ತು ಯಾವ ಕಾಲಿನದ್ದು ಎಂದು ಹೇಳಲು ಬರುವುದಿಲ್ಲ. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ

ಮಾಡಿರುತ್ತೇನೆ. ನನಗೆ ಯಾವುದಾದರೂ ಗಲಾಟೆ ಆದಲ್ಲಿ ಅದೇ ದಿನವೇ ದೂರು ನೀಡಬೇಕೆಂದು ಗೊತ್ತಿರುತ್ತದೆ. ನಾನು ಅದೇ ದಿನ ಠಾಣೆಗೆ ಹೋಗಿರುವುದಿಲ್ಲ. ಚಾಸಾ 5 ಮತ್ತು 6 ನನ್ನ ಸಂಬಂಧಿ ಎಂದರೆ ಸರಿ. ನನ್ನ ಮನೆಯ ಅಕ್ಕಪಕ್ಕ ಸುಮಾರು 15 ಮನೆಗಳು ಇವೆ. ಗಲಾಟೆ ಆಗಿದೆ ಎನ್ನುವ ಸಮಯದಲ್ಲಿ 20 ರಿಂದಂ 25 ಜನ ಸೇರಿದ್ದರು. ಅವರ ಹೆಸರುಗಳನ್ನು ನಾನು ದೂರಿನಲ್ಲಿ ಬರೆಸಿರುವುದಿಲ್ಲ.

ನಾನು 11.30 ರಿಂದ 12 ಗಂಟೆಯ ಸಮಯದಲ್ಲಿ ನಾನು ಠಾಣೆಗೆ ಹೋಗಿರುತ್ತೇನೆ. ನಾನು ಮತ್ತು ಚಾಸಾ 3 ಮತ್ತು 4 ಠಾಣೆಗೆ ಹೋಗಿರುತ್ತೇವೆ. 1 ರಿಂದ 1 ವರೆ ಗಂಟೆಯ ವರೆಗೆ ನಾನು ಠಾಣೆಯಲ್ಲೆದ್ದೆ. ಠಾಣೆಯಲ್ಲಿ ಒಂದು ಸಹಿಯನ್ನು ಪಡೆದುಕೊಂಡಿರುತ್ತಾರೆ. ಠಾಣೆಯಲ್ಲಿ ಬೇರೆ ಯಾರ ಸಹಿಯನ್ನು ಪಡೆದಿರುವುದಿಲ್ಲ. ದೂರನ್ನು ನೀಡುವ ಕುರಿತು ಠಾಣೆಗೆ ಹೋಗಿದ್ದು ಠಾಣೆಗೆ ಹೋಗಿರುವುದಿಲ್ಲ. ದಿಃ 14.01.2019 ರಂದು ಠಾಣೆಗೆ ಹೋಗಿರಿಲಿಲ್ಲ.

ಮಹಜರಗೆ ಬರುವ ಮೊದಲು ಪೊಲಿಸರು ನೋಟಿಸ್ ನೀಡಿರುವುದಿಲ್ಲ. 14 ನೇ ತಾರೀಖಿನಂದು ರಾಮಚಂದ್ರಪ್ಪ ಎನ್ನುವವರು ಬಂದಿದ್ದು ಇನೊಬ್ಬರು ಸಹ ಅವರ ಜೊತೆ ಬಂದಿದ್ದು ಅವರ ಹೆಸರು ಗೊತ್ತಿಲ್ಲ. ಗಲಾಟೆ ಆಗಿರುವ ಸ್ಥಳಕ್ಕೆ ಪೊಲಿಸರು ಬಂದಿರುತ್ತಾರೆ. ಪೋಲಿಸರು ಮನೆಯ ಮುಂಬಾಗದ ರಸ್ತೆಯ ನಂತರ ಇರುವ ಜಮೀನಿಗೆ ಬಂದಿರುತ್ತಾರೆ ಗಲಾಟೆ ಆಗಿದೆ ಎನ್ನುವ ಸ್ಥಳದ ಪಶ್ಚಿಮ ದಿಕ್ಕಿಗೆ ಮನೆ ಇರುತ್ತದೆ. ಪೊಲಿಸರು ಬರವಣಿಗೆ ಮಾಡಿ ಸಹಿ ಪಡೆದಿರುತ್ತಾರೆ. ಅದರಲ್ಲಿ ಏನು ಬರೆದುಕೊಂಡಿದ್ದಾರೆಂದು ನಾನು ಓದಿರುವುದಿಲ್ಲ. ಸ್ದಳದಲ್ಲಿ ಪೋಲಿಸರು ಬಂದಾಗ 10 ಜನ ಸೇರಿದ್ದರು. ಇಬ್ಬರ ಸಹಿಯನ್ನು ಮಾತ್ರ ಪೋಲಿಸರು ಪಡೆದಿರುತ್ತಾರೆ. ಚಾಸಾ 7 ಮತ್ತು 8 ಅವರ ಸಹಿ ಮಾತ್ರ ಪಡೆದಿರುತ್ತಾರೆ. ಚಾಸಾ8 ಚಾಸಾ 6 ಅವರ ಹೆಂಡತಿ ಎಂದರೆ ಸರಿ. ಕಳ್ಳಿ ಕಡೆಯುತ್ತಿರುವಾಗ ಗಲಾಟೆ ಆಗಿರುತ್ತದೆಂದು ನಾನು ಪೊಲಿಸರಿಗೆ ಹೇಳಿರುತ್ತೇನೆ. ಪಂಚನಾಮೆಯಲ್ಲಿ ಕಳ್ಳಿ

ಕಡಿಯುತ್ತಿದ್ದ ಬಗ್ಗೆ  ಬರೆದಿಲ್ಲ ನೀವು ದೂರನ್ನು ನೀಡಿದ್ದು ಸಹಿ ಮಾಡಿ ಎಂದಿದ್ದಕ್ಕೆ ಸಹಿ ಮಾಡಿರುತ್ತೇನೆ.  ಸ್ಥಳದಲ್ಲಿ ಪೋಲಿಸರು ಸೀರೆಯನ್ನು ಜಪ್ತು ಮಾಡಿಕೊಂಡಿರುತ್ತಾರೆ. ಸ್ಥಳದಲ್ಲಿ ಕಂಪ್ಯೂಟರ್ ನಲ್ಲಿ ಏನನ್ನು ಟೈಪ್ ಮಾಡಿಕೊಂಡಿರುವುದಿಲ್ಲ. ಸ್ಥಳದಲ್ಲಿ 1 ಗಂಟೆಗಳ ಕಾಲ ಇದ್ದರು. ದೂರನ್ನು ನೀಡಲು ಹೋಗಿದ್ದನ್ನು ಹೊರತು ಪಡಿಸಿ ಬೇರೆ ಯಾವ ದಿನವೂ ಚಾಸಾ 3 ಮತ್ತು 4 ಠಾಣೆಗೆ ಹೋಗಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.